ಶ್ರೀಮತಿ ಲಕ್ಷ್ಮಮ್ಮ ಕೋಂ ಗಂಗರಾಜು, ಹಳೇ ಬುದ್ದಿವಂತನಹಳ್ಳಿ, ಮಂಚೇನಹಳ್ಳಿ ಹೋಬಳಿ, ಗೌರಿಬಿದನೂರು ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ, ವರ್ಷ ೪೦ ಇವರು ದಿನಾಂಕ:೨೪-೧೧-೨೦೧೪ ರಂದು ಬೆಳಿಗ್ಗೆ ೬-೩೦ ಗಂಟೆ ಸುಮಾರಿಗೆ ಮಂಚೇನಹಳ್ಳಿ ಮುಖ್ಯ ರಸ್ತೆಯ ಪೆಟ್ರೋಲ್ ಬಂಕ್ ಬಳಿ ನಡೆದು ಹೋಗುವ ಸಂದರ್ಭದಲ್ಲಿ ಇಬ್ಬರು ಅಪರಿಚಿತರು ಬೈಕ್‌ನಲ್ಲಿ ಬಂದು ಸದರಿಯವರ ಮೈಮೇಲೆ ಹಾಗೂ ಮುಖದ ಮೇಲೆ ಆ್ಯಸಿಡ್ ಎರಚಿ ಪರಾರಿಯಾಗಿದ್ದು, ಮಂಚೇನಹಳ್ಳಿ ಪೊಲೀಸ್ ಠಾಣೆಯಲ್ಲಿ ಎಫ್.ಐ.ಆರ್. ದಾಖಲಾಗಿರುತ್ತದೆ.

ಆ್ಯಸಿಡ್ ದಾಳಿಗೆ ಒಳಗಾದ ಶ್ರೀಮತಿ ಲಕ್ಷ್ಮಮ್ಮ ಕೋಂ ಗಂಗರಾಜು ಇವರ ಆರೋಗ್ಯ ಸ್ಥಿತಿಯನ್ನು ವಿಚಾರಿಸಲು ದಿ:೨೪-೧೧-೨೦೧೪ ರಂದು ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷರಾದ ಶ್ರೀಮತಿ ಮಂಜುಳಾ ಮಾನಸ ಇವರು ಚಿಕ್ಕಬಳ್ಳಾಪುರ ಜಿಲ್ಲಾ ಆಸ್ಪತ್ರೆಗೆ ಭೇಟಿ ನೀಡಿರುತ್ತಾರೆ.

ಕರ್ನಾಟಕ ಸರ್ಕಾರದ "ಸುರಕ್ಷಾ ಯೋಜನೆ" ಅಡಿಯಲ್ಲಿ ಕರ್ನಾಟಕ ರಾಜ್ಯ ಮಹಿಳಾ ಆಯೋಗದ ವತಿಯಿಂದ ಶ್ರೀಮತಿ ಮಂಜುಳಾ ಮಾನಸ, ಅಧ್ಯಕ್ಷರು ಆ್ಯಸಿಡ್ ದಾಳಿಗೆ ಒಳಗಾದ ಶ್ರೀಮತಿ ಲಕ್ಷ್ಮಮ್ಮ ಕೋಂ ಗಂಗರಾಜು ಇವರಿಗೆ ರೂ.೧,೦೦,೦೦೦/-ಗಳನ್ನು (ರೂಪಾಯಿ ಒಂದು ಲಕ್ಷ ಮಾತ್ರ) ಚೆಕ್ಕು ಮುಖಾಂತರ ಪರಿಹಾರ ಧನವಾಗಿ ನೀಡಿರುತ್ತಾರೆ.



















ಶ್ರೀಮತಿ ಅಕ್ಕಯ್ಯಮ್ಮ ನಕ್ಕುಂದಿ, ದೊಮ್ಮಸಂದ್ರ ಗ್ರಾಮ, ಸರ್ಜಾಪುರ ಹೋಬಳಿ, ಆನೇಕಲ್ಲು ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರಿಗೆ ದಿನಾಂಕ: ೧೧.೦೩.೨೦೧೪ ರಂದು ರಾತ್ರಿ ೮:೩೦ ರ ವೇಳೆಯಲ್ಲಿ ಮುನಿಯಪ್ಪ ಮತ್ತು ಇತರರು ಆ್ಯಸಿಡ್ ಎರಚಿರುತ್ತಾರೆ. ಈ ಸಂಬಂಧ ಸರ್ಜಾಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ಹಾಗೂ ಎಫ್.ಐ.ಆರ್. ದಾಖಲಾಗಿರುತ್ತದೆ.

ಆ್ಯಸಿಡ್ ದಾಳಿಗೆ ಒಳಗಾದ ಶ್ರೀಮತಿ ಅಕ್ಕಯ್ಯಮ್ಮ ನಕ್ಕುಂದಿ, ದೊಮ್ಮಸಂದ್ರ ಗ್ರಾಮ, ಇವರನ್ನು ಮಹಿಳಾ ಆಯೋಗದ ಅಧ್ಯಕ್ಷರಾದ ಮಂಜುಳಾ ಮಾನಸ ಇವರು ೦೨.೦೭.೨೦೧೪ ರಂದು ಸುರಕ್ಷಾ ಯೋಜನೆಯಡಿ ೧.೦೦ ಲಕ್ಷ ರೂಪಾಯಿಗಳನ್ನು ನೀಡಿದ್ದು, ೨ನೇ ಕಂತಿನ ಪರಿಹಾರ ಧನವಾಗಿ ದಿನಾಂಕ: ೧೯.೧೧.೨೦೧೫ ರಂದು ರೂ. ೧.೦೦ ಲಕ್ಷ ರೂಪಾಯಿಗಳ ಚೆಕ್ಕನ್ನು ವಿತರಿಸಲಾಗಿದೆ.







